# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ – ಕಂದಾಯ ಇಲಾಖೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಂದಾಯ ಇಲಾಖೆಗೆ ಸಂಬಂಧಿಸಿದಂತೆ ಆಸ್ತಿತೆರಿಗೆ ಪಾವತಿಸುವಲ್ಲಿ ಹಾಗೂ ಖಾತಾ ನೊಂದಾವಣೆ/ವರ್ಗಾವಣೆ/ವಿಭಜನೆ ಪಡೆಯುವಲ್ಲಿ ಸಾರ್ವಜನಿಕರು ಅನುಸರಿಸಬೇಕಾದ ವಿಧಿವಿಧಾನಗಳು ಈ ಕೆಳಕಂಡಂತಿರುತ್ತವೆ.

*1) ಅರ್ಜಿದಾರರಿಗೆ ಆಸ್ತಿ ಖಾತಾ ವರ್ಗಾವಣೆ ಇತ್ಯಾದಿ ಪದ್ಧತಿ ವಿವರ*

| *ವಿವಿಧ ಖಾತೆ ಅರ್ಜಿಗಳ ವಿವರ* | *ಸಲ್ಲಿಸಬೇಕಾದ ದಾಖಲಾತಿಗಳು* | *ನಿಗದಿಪಡಿಸಲಾದ ಅವಧಿ* |
|---|---|---|
| ಖಾತಾ ನೊಂದಾವಣೆ:-<br>ನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ರೆವಿನ್ಯೂ ಪ್ರದೇಶ, ಬಿ.ಡಿ.ಎ.ಯಿಂದ ಮರು ಮಂಜೂರಾದ ಪ್ರದೇಶ ಮತ್ತು ಗ್ರಾಮಠಾಣಾ ಪ್ರದೇಶ ವ್ಯಾಪ್ತಿಯಲ್ಲಿರುವ ಆಸ್ತಿಗಳ ಖಾತೆಯನ್ನು ನೊಂದಾಯಿಸಲು | ✓ ನಿಗಧಿಪಡಿಸಿರುವ ಅರ್ಜಿ ನಮೂನೆ<br>✓ ನೊಂದಾಯಿತ ಹಕ್ಕುಸ್ವಾಮ್ಯಪತ್ರ<br>✓ ವ್ಯವಸಾಯೇತರ ಉದ್ದೇಶಕ್ಕಾಗಿ ಭೂಪರಿವರ್ತನೆ ಆಗಿರುವ ಪ್ರಮಾಣ ಪತ್ರ ಹಾಗೂ ಸದರಿ ಭೂಪರಿವರ್ತನೆ ಯಾಗಿರುವ ಸ್ವತ್ತು ವಿಭಜನೆ ಹೊಂದಿದ್ದಲ್ಲಿ ಸ್ವತ್ತಿನ ಅಂಗೀಕೃತ ನಕ್ಷೆ<br>✓ ಸರ್ವೆ ಇಲಾಖೆಯ ನಕ್ಷೆ ಹಾಗೂ ಪ್ರಮಾಣ ಪತ್ರ<br>✓ ಸುಧಾರಣಾ ವೆಚ್ಚವನ್ನು ಪಾವತಿಸಿರುವ ವಿವರ,<br>✓ ಆಸ್ತಿ ಇರುವ ಸ್ಥಳ & ಅಳತೆಗಳನ್ನು ತಿಳಿಸುವ ನಕ್ಷೆ<br>✓ ಆಸ್ತಿ ಋಣಭಾರ ಪ್ರಮಾಣ ಪತ್ರ (ಹಿಂದಿನ 10 ವರ್ಷಗಳ ಅವಧಿಗೆ) | 30 ಕೆಲಸದ ದಿವಸಗಳು |
| ಖಾತಾ ವರ್ಗಾವಣೆ/ನೊಂದಾವಣೆ:-<br>ಬಿಡಿಎ/ಕೆಹೆಚ್‌ಬಿಯಿಂದ ಹಂಚಿಕೆಯಾಗಿರುವ ಆಸ್ತಿಯ ಬಗ್ಗೆ, ಹಾಲಿ ಇರುವ ಖಾತೆಯನ್ನು ಮಾರಾಟದ ದಸ್ತಾವೇಜು ಅಥವಾ ಆಸ್ತಿಯನ್ನು ಇತರೆ ನೊಂದಣಿ ಪತ್ರಗಳ ಮೂಲಕ ವರ್ಗಾಯಿಸಿದಲ್ಲಿ (ವಿಭಾಗ ಪತ್ರ/ ದಾನಪತ್ರ/ ಹಕ್ಕುಬಿಡುಗಡೆ) ಪ್ರಮಾಣ ಪತ | ✓ ನಿಗಧಿಪಡಿಸಿರುವ ಅರ್ಜಿ ನಮೂನೆ<br>✓ ನೊಂದಾಯಿತ ಹಕ್ಕುಪತ್ರದ ನಕಲುಗಳು<br>✓ ಕಂದಾಯ ಪಾವತಿಸಿರುವ ರಶೀದಿ<br>✓ ಸ್ವಾಧೀನ ಪತ್ರ/ಹಾಲಿ ಖಾತೆದಾರರ ಹೆಸರಿನಲ್ಲಿನ ಖಾತೆ ಪ್ರಮಾಣ ಪತ್ರ<br>✓ ಆಸ್ತಿ ಇರುವ ಸ್ಥಳ & ಅಳತೆಗಳನ್ನು ತಿಳಿಸುವ ನಕ್ಷೆ | 7 ಕೆಲಸದ ದಿವಸಗಳು |
| ಖಾತಾ ವರ್ಗಾವಣೆ:-<br>ಉತ್ತರಾಧಿಕಾರಿಯಾಗಿ / ವಂಶಪರಂಪರೆಯಾಗಿ/ ದಾನವಾಗಿ ಪಡೆದಿರುವುದಕ್ಕೆ ಪತ್ರಗಳು ಅಥವಾ ಹಕ್ಕು ನಿರೂಪಿಸುವ ದಾಖಲೆಗಳ ಮೂಲಕ ಖಾತಾ ವರ್ಗಾವಣೆಗಾಗಿ | ✓ ನಿಗಧಿಪಡಿಸಿರುವ ಅರ್ಜಿ ನಮೂನೆ<br>✓ ನೊಂದಾಯಿತ ಹಕ್ಕುಸ್ವಾಮ್ಯಪತ್ರ<br>✓ ಆಸ್ತಿತೆರಿಗೆ ಪಾವತಿಸಿರುವ ರಶೀದಿಯ ನಕಲುಗಳು,<br>✓ ಆಸ್ತಿ ಇರುವ ಸ್ಥಳ & ಅಳತೆಗಳನ್ನು ತಿಳಿಸುವ ನಕ್ಷೆ<br>✓ ವಂಶಪಾರಂಪರ್ಯವಾಗಿ ಪಡೆದಿರುವುದಕ್ಕೆ/ದಾನ/ನ್ಯಾಯಾಲಯದ ಡಿಕ್ರಿ ಆದೇಶ ಇವುಗಳ ನಕಲುಗಳೊಡನೆ ಪ್ರಮಾಣ ಪತ್ರ<br>✓ ಖಾತೆದಾರರು ಕಾಲವಾಗಿದ್ದಲ್ಲಿ ಮರಣ ಪತ್ರದ ಮೂಲ ಪ್ರತಿ ಹಾಗೂ ಅರ್ಜಿದಾರರಿಂದ ಪ್ರಮಾಣ ಪತ್ರ (ಅಫಿಡಿವೇಟ್) | 7 ಕೆಲಸದ ದಿವಸಗಳು |
| ಖಾತೆಗಳನ್ನು ಒಂದುಗೂಡಿಸುವಿಕೆ:- | ✓ ನಿಗಧಿಪಡಿಸಿರುವ ಅರ್ಜಿ ನಮೂನೆ<br>✓ ನೊಂದಾಯಿತ ಹಕ್ಕುಸ್ವಾಮ್ಯಪತ್ರ /ಪಾಲುದಾರಿಕೆ ಪತ್ರ<br>✓ ಸಂಸ್ಥೆಯ ನೊಂದಾವಣೆ ಪ್ರಮಾಣ ಪತ್ರ<br>✓ ಕಂದಾಯ ಪಾವತಿಸಿರುವ ರಶೀದಿಯ ನಕಲು,<br>✓ ಸದರಿ ಆಸ್ತಿಗಳ ಖಾತೆ ನಕಲು ಪ್ರಮಾಣ ಪತ್ರ<br>✓ ಸುಧಾರಣಾ ವೆಚ್ಚವನ್ನು ಪಾವತಿಸಿರುವ ವಿವರ,<br>✓ ಆಸ್ತಿ ಇರುವ ಸ್ಥಳ & ಅಳತೆಗಳನ್ನು ತಿಳಿಸುವ ನಕ್ಷೆ<br>✓ ರಕ್ತ ಸಂಬಂಧ(ಒಂದೇ ಕುಟುಂಬಕ್ಕೆ ಸೇರಿದವರಿಂದ) ರುಜುವಾತು ಮಾಡುವ ಪ್ರಮಾಣ ಪತ್ರ<br>✓ ಬಿಡಿಎ ಲೇಔಟ್‌ನಲ್ಲಿ ಆಸ್ತಿಯಿದ್ದಲ್ಲಿ ಬಿ.ಡಿ.ಎ ಯಿಂದ ನಿರಾಕ್ಷೇಪಣಾ ಪತ್ರ (ಖಾಲಿಜಮೀನಿಗೆ) | 30 ಕೆಲಸದ ದಿವಸಗಳು |
| ಖಾತಾ ವಿಭಜನೆ:- | ✓ ನಿಗಧಿಪಡಿಸಿರುವ ಅರ್ಜಿ ನಮೂನೆ<br>✓ ನೊಂದಾಯಿತ ಹಕ್ಕುಸ್ವಾಮ್ಯಪತ್ರ (ಒಬ್ಬರಿಂದ ಮತ್ತೊಬ್ಬರಿಗೆ ಬಂದಿರುವ ದಾಖಲೆಗಳು),<br>✓ ಕಂದಾಯ ಪಾವತಿಸಿರುವ ರಶೀದಿಯ ನಕಲುಗಳು,<br>✓ ಸುಧಾರಣಾ ವೆಚ್ಚವನ್ನು ಪಾವತಿಸಿರುವ ವಿವರ,<br>✓ ಆಸ್ತಿ ಇರುವ ಸ್ಥಳ ಮತ್ತು ವಿಭಜನೆಗೆ ಒಳಪಡುವ ಎಲ್ಲೆಗಳ ಅಳತೆಗಳನ್ನು ತಿಳಿಸುವ ನಕ್ಷೆ<br>✓ ಬಿಡಿಎ ಲೇಔಟ್‌ನಲ್ಲಿ ಆಸ್ತಿಯು ಇದ್ದಲ್ಲಿ ಬಿ.ಡಿ.ಎ ಯಿಂದ ನಿರಾಕ್ಷೇಪಣಾ ಪತ್ರ (ಖಾಲಿ ಜಮೀನಿಗೆ) | 30 ಕೆಲಸದ ದಿವಸಗಳು |

ಖಾತಾ ನೊಂದಾವಣೆ/ವರ್ಗಾವಣೆ/ವಿಭಜನೆ ಪಡೆಯುವಲ್ಲಿ ಸಾರ್ವಜನಿಕರು ಈ ಮೇಲೆ ತಿಳಿಸಿರುವ ದಾಖಲಾತಿಗಳನ್ನು ನಿಗಧಿತ ಅರ್ಜಿಯೊಡನೆ ಸಂಬಂಧಪಟ್ಟ ಸಹಾಯಕ ಕಂದಾಯ ಅಧಿಕಾರಿಗಳ ಕಛೇರಿಯಲ್ಲಿ ಸಲ್ಲಿಸಿ ಸ್ವತ್ತಿನ ನೊಂದಾಯಿತ ಹಕ್ಕು ನಿರೂಪಣೆ ದಾಖಲೆ ಪತ್ರದ ಮುದ್ರಾಂಕ ಛಾಪಾ ಕಾಗದದ ಕಿಮ್ಮತ್ತಿನ ಮೇಲೆ ಶೇ.2ರಷ್ಟು ಖಾತಾ ನೊಂದಾವಣೆ/ವರ್ಗಾವಣೆ/ ವಿಭಜನೆ ಶುಲ್ಕವನ್ನು ಪಾವತಿಸಿ ಖಾತೆಯನ್ನು ಪಡೆಯಬಹುದಾಗಿರುತ್ತದೆ.

ಮುಂದುವರೆದಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ಕರ್ನಾಟಕ ಗೃಹ ಮಂಡಳಿಯಿಂದ ಮಂಜೂರಾದ ಸ್ವತ್ತುಗಳು ಹಾಗೂ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಈಗಾಗಲೇ ಖಾತೆಯನ್ನು ನೊಂದಾಯಿಸಿದ್ದಲ್ಲಿ ಸಂಬಂಧಪಟ್ಟ ದಾಖಲಾತಿಗಳೊಡನೆ ಅರ್ಜಿ ಸಲ್ಲಿಸಿದ 7 ಕೆಲಸದ ದಿನಗಳ ಒಳಗಾಗಿ ಖಾತೆಯನ್ನು ವರ್ಗಾಯಿಸಲಾಗುವುದು ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ರೀಕನ್ವೆ ಆದ ಪ್ರದೇಶಗಳು, ಗ್ರಾಮಠಾಣಾ ಮತ್ತು ರೆವಿನ್ಯೂ ಪ್ರದೇಶಗಳು, ಬೃಹತ್ ಸ್ವರೂಪದ ಕಟ್ಟಡಗಳಲ್ಲಿನ ಸ್ವತ್ತುಗಳ ಖಾತೆಯನ್ನು 30 ಕೆಲಸದ ದಿನಗಳ ಒಳಗಾಗಿ ವರ್ಗಾಯಿಸಲಾಗುವುದು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಂದಾಯ ಇಲಾಖೆಯಲ್ಲಿ ಸಾರ್ವಜನಿಕರು ತಮ್ಮ ಸ್ವತ್ತುಗಳಿಗೆ ಖಾತಾ ಪ್ರಮಾಣ ಪತ್ರ ಮತ್ತು ಖಾತಾ ಉದೃತ ಭಾಗಗಳನ್ನು ಪಡೆಯಲು ಅನುಸರಿಸಬೇಕಾದ ವಿಧಾನಗಳು ಮತ್ತು ವಿವರಗಳು ಈ ಕೆಳಕಂಡಂತಿರುತ್ತವೆ.

*2. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಂದಾಯ ಇಲಾಖೆಯಲ್ಲಿ ಸಾರ್ವಜನಿಕರು ಖಾತಾ ಪ್ರಮಾಣ ಪತ್ರ ಮತ್ತು ಖಾತಾ ಉದೃತ ಭಾಗಗಳನ್ನು ಪಡೆಯಲು ಅನುಸರಿಸಬೇಕಾದ ವಿಧಾನಗಳು ಮತ್ತು ವಿವರಗಳು.*

| ಸೇವೆಯ ವಿವರ | ಸಲ್ಲಿಸಬೇಕಾದ ದಾಖಲಾತಿಗಳು | ಸಂಪರ್ಕಿಸಬೇಕಾದ ಕಛೇರಿ | ನಿಗದಿಪಡಿಸಲಾದ ಅವಧಿ |
|---|---|---|---|
| ಖಾತಾ ಪ್ರಮಾಣ ಪತ್ರ | ✓ ಸ್ವತ್ತಿನ ಮಾಲೀಕರಿಂದ ಅರ್ಜಿ<br>✓ ಕಂದಾಯ ಪಾವತಿಸಿರುವ ರಸೀತಿಯ ನಕಲುಗಳು<br>✓ ರೂ. 25/- ಗಳ ಶುಲ್ಕವನ್ನು ಪಾವತಿಸುವುದು. | ಎಲ್ಲಾ ಸಹಾಯಕ ಕಂದಾಯ ಅಧಿಕಾರಿಗಳ ಕಛೇರಿ ಹಾಗೂ ನಾಗರೀಕ ಸೇವಾ ಕೇಂದ್ರಗಳು | ವಿದ್ಯುನ್ಮಾನ ಮಾಧ್ಯಮದಲ್ಲಿ ಲಭ್ಯವಿರುವ ವಿವರಗಳಿಗಾಗಿ 3 ಕೆಲಸದ ದಿನಗಳು |
| | | | ವಿದ್ಯುನ್ಮಾನ ಮಾಧ್ಯಮದಲ್ಲಿ ಲಭ್ಯವಿರದಂಥ ವಿವರಗಳಿಗಾಗಿ 7 ಕೆಲಸದ ದಿನಗಳು |
| ಖಾತಾ ಉದೃತ ಭಾಗ | ✓ ಅರ್ಜಿ<br>✓ ಕಂದಾಯ ಪಾವತಿಸಿರುವ ರಸೀತಿಯ ನಕಲುಗಳು<br>✓ ರೂ. 100/- ಗಳ ಶುಲ್ಕವನ್ನು ಪಾವತಿಸುವುದು. | ಎಲ್ಲಾ ಸಹಾಯಕ ಕಂದಾಯ ಅಧಿಕಾರಿಗಳ ಕಛೇರಿ ಹಾಗೂ ನಾಗರೀಕ ಸೇವಾ ಕೇಂದ್ರಗಳು | ವಿದ್ಯುನ್ಮಾನ ಮಾಧ್ಯಮದಲ್ಲಿ ಲಭ್ಯವಿರುವ ವಿವರಗಳಿಗಾಗಿ 3 ಕೆಲಸದ ದಿನಗಳು |
| | | | ವಿದ್ಯುನ್ಮಾನ ಮಾಧ್ಯಮದಲ್ಲಿ ಲಭ್ಯವಿರದಂಥ ವಿವರಗಳಿಗಾಗಿ 7 ಕೆಲಸದ ದಿನಗಳು |

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಂದಾಯ ಇಲಾಖೆಗೆ ಸಂಬಂಧಪಟ್ಟಂತೆ ಖಾತಾ ಪ್ರಮಾಣ ಪತ್ರ ಹಾಗೂ ಖಾತಾ ಉದೃತ ಭಾಗಗಳನ್ನು ಪಡೆಯಲು ಸಾರ್ವಜನಿಕರು 'ಸಕಾಲ'ದ ಅಡಿಯಲ್ಲಿ ಅರ್ಜಿ ಸಲ್ಲಿಸಬಹುದಾಗಿರುತ್ತದೆ.